

# ಶಿಶು ಪ್ರಾಸಗಳು

■ ಲಕ್ಷ್ಮಣ್ ಜಮದಾಡೆ
ಚಿತ್ರಗಳು: ವಿಜಯಕುಮಾರಿ

### ಕಂದ

ಪುಟಾಣಿ ಕಂದ
ನೀ ಭಾಳ್ ಚೆಂದ
ನಗುತಲಿ ನಿಂತ್ರ
ಹುಣ್ಣಿಮೆ ಚೆಂದ್ರ
ಸೊಂಡಿ ತಿರುವಿ ಅಳುವೆ
ಗಿಂಡಿ ಹಾಲ್ ಕುಡಿವೆ



### ಚಿಟ್ಟೆ

ಅತ್ತಿಂದ್ ಇತ್ತ
ಹೂವಿಂದ್ ಹೂವಿಗೆ
ಹಾರುವ ಚೆಂದದ ಚಿಟ್ಟೆ
ಯಾವೂರ್ ಪ್ಯಾಟ್ಯಾಗ್
ಸಿಗತೈತಿ ಹೇಳು
ಇಂಥಾ ಚೆಂದದ ಬಟ್ಟೆ



### ರೈತ

ಅಕ್ಕಾ ಅಕ್ಕಾ
ಹಕ್ಕಿ ನೋಡ
ಹಕ್ಕಿ ಬಾಯಾನ
ಅಕ್ಕಿ ನೋಡ
ಅಕ್ಕಿ ಬೆಳೆದ
ರೈತನ ನೋಡ
ಅವನೇ ಅನ್ನ
ದಾತ ನೋಡ

### ಅಮ್ಮಾ

ಕಾವ್ ಕಾವ್
ಎಂದಿತು ಕಾಗೆ
ಚಿಂವ್ ಚಿಂವ್
ಎಂದಿತು ಗುಬ್ಬಚ್ಚಿ
ಮ್ಯಾಂವ್ ಮ್ಯಾಂವ್
ಎಂದಿತು ಬೆಕ್ಕು
ಬೌ ಬೌ
ಎಂದಿತು ನಾಯಿ
ಕರ್ರ್ ಕರ್ರ್
ಎಂದಿತು ಕಪ್ಪೆ
ಅಮ್ಮಾ ಎಂದರೆ
ನಾ ತಪ್ಪೆ?

## ಕುಂಚ ಪ್ರಪಂಚ





**ಎಸ್. ಅನಿರುದ್ಧ ಕುಮಾರ್**
8ನೇ ತರಗತಿ
ಬಿ.ಬಿ.ಯು.ಎಲ್. ಜೈನ್ ವಿದ್ಯಾಲಯ
ಬೆಂಗಳೂರು

**ನೀವೂ ಚಿತ್ರ ಬರೆಯಿರಿ**

'ಸುಧಾ' ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ– ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ– ರೇಖಾ ಚಿತ್ರಗಳನ್ನು ಕಳುಹಿಸಬಹುದು.
ಇ ಮೇಲ್:
editorsu@sudha.co.in

